# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 444 |
| ಮಾನ್ಯ ಸದಸ್ಯರ ಹೆಸರು | ಡಾ:ಚಂದ್ರಶೇಖರ ಬಸವರಾಜ ಪಾಟೀಲ್ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 10-03-2025 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. |

| ಕ್ರ.ಸಂ: | ಪ್ರಶ್ನೆ | ಉತ್ತರ |
|---|---|---|
| ಅ) | ಕಲ್ಯಾಣ ಕರ್ನಾಟಕ ಭಾಗದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು, | ಕಲ್ಯಾಣ ಕರ್ನಾಟಕ ಭಾಗದಲ್ಲಿ ಖಾಲಿ ಇರುವ ಹುದ್ದೆ ಮಾಹಿತಿ ಈ ಕೆಳಕಂಡಂತಿದೆ. |

| ಕ್ರ.ಸಂ | ವೃಂದ | ಖಾಲಿ ಹುದ್ದೆಗಳ ಸಂಖ್ಯೆ |
|---|---|---|
| 1. | ಗ್ರೂಪ್-ಎ | 488 |
| 2. | ಗ್ರೂಪ್-ಬಿ | 41 |
| 3. | ಗ್ರೂಪ್-ಸಿ | 2689 |
| 4. | ಗ್ರೂಪ್-ಡಿ | 1696 |

| | | |
|---|---|---|
| ಆ) | ಖಾಲಿ ಹುದ್ದೆಗಳ ಭರ್ತಿಗೆ ಸರಕಾರ ಯಾವ ಕ್ರಮ **ಕೈಗೊಂಡಿದೆ? (**ವಿವರ ಒದಗಿಸುವುದು) | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಲ್ಯಾಣ ಕರ್ನಾಟಕ ವೃಂದದಲ್ಲಿ ಖಾಲಿ ಇರುವ ವಿವಿಧ ಅರೆ ವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಅಧಿಸೂಚನೆ ಸಂ:ಹೆಚ್‌ಎಫ್‌ಡಬ್ಲ್ಯು 709 ಹೆಚ್‌ಎಸ್‌ಎಂ 2017, ದಿನಾಂಕ:17.05.2022ರನ್ವಯ ವಿಶೇಷ ನೇಮಕಾತಿ ಸಮಿತಿಯ ಅಧಿಸೂಚನೆ ಸಂಖ್ಯೆ:ಎಸ್.ಆರ್.ಸಿ./ಕೆ.ಕೆ./ 14/2022-23, ದಿನಾಂಕ:24.08.2022ರಲ್ಲಿ ಈ ಕೆಳಕಂಡ ವಿವಿಧ ಅರೆ ವೈದ್ಯಕೀಯ ಹುದ್ದೆಗಳನ್ನು ಭರ್ತಿಮಾಡಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ, ಅರ್ಹ ಅಭ್ಯರ್ಥಿಗಳ ಮೂಲ ದಾಖಲಾತಿ ಪರಿಶೀಲನಾ ಕಾರ್ಯವು ಪೂರ್ಣಗೊಂಡಿರುತ್ತದೆ. |

| **ಕ್ರ ಸಂ** | **ಹುದ್ದೆ** | **ಅಧಿಸೂಚಿಸಿರುವ ಹುದ್ದೆಗಳ ಸಂಖ್ಯೆ** |
|---|---|---|
| 1 | ಸೈಕಾಲಜಿಸ್ಟ್ | 3 |
| 2 | ಸೈಕ್ಯಾಟ್ರಿಕ್ಸೋಷಿಯಲ್ ವರ್ಕರ್ | 1 |
| 3 | ಮೈಕ್ರೋಬಯಾಲಜಿಸ್ಟ್ | 6 |
| 4 | ಸಹಾಯಕ ಎಂಟಮಾಲಜಿಸ್ಟ್* | 1 |
| 5 | ಫಿಜಿಯೋಥೆರಪಿಸ್ಟ್ | 5 |
| 6 | ಡೆಂಟಲ್ ಮೆಕ್ಯಾನಿಕ್ | 3 |
| 7 | ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ | 54 |
| 8 | ನೇತ್ರಾಧಿಕಾರಿ | 15 |
| 9 | ಫಾರ್ಮಸಿಅಧಿಕಾರಿ | 98 |
| 10 | ಇ.ಸಿ.ಜಿ.ತಂತ್ರಜ್ಞ | 5 |
| 11 | ಡಯಾಲಿಸಿಸ್ತಂತ್ರಜ್ಞ | 2 |
| 12 | ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ | 126 |
| 13 | ಎಲೆಕ್ಟ್ರೀಷಿಯನ್ | 1 |
| | **ಒಟ್ಟು** | **320** |

* ಕಲ್ಯಾಣ ಕರ್ನಾಟಕ ವೃಂದಲ್ಲಿನ ಸಹಾಯಕ ಕೀಟ ಶಾಸ್ತ್ರಜ್ಞರ ಹುದ್ದೆಗೆ ಅಧಿಸೂಚನೆಯಲ್ಲಿ

| | | |
|---|---|---|
| | | ತಿಳಿಸಿದ್ದ ವಿದ್ಯಾರ್ಹತೆಯನ್ನು ಪ್ರಶ್ನಿಸಿ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಈ ಬಗ್ಗೆ ನ್ಯಾಯ ಮಂಡಳಿಯ ಆದೇಶದನ್ವಯ ಪರಿಷ್ಕೃತ ವಿದ್ಯಾರ್ಹತೆಯನ್ನು ಅಳವಡಿಸಿ ತಿದ್ದುಪಡಿ ಅಧಿಸೂಚನೆಯನ್ನು ದಿನಾಂಕ:13.11.2024ರಂದು ಹೊರಡಿಸಲಾಗಿದ್ದು, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:03.12.2024 ಆಗಿರುತ್ತದೆ. ಸದರಿ ಹುದ್ದೆಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಲ್ಲಿ ಅರ್ಹ ಅಭ್ಯರ್ಥಿಗಳಿಗೆ ಮೂಲದಾಖಲಾತಿ ಪರಿಶೀಲನೆಯನ್ನು ನಡೆಸುವ ಹಂತದಲ್ಲಿರುತ್ತದೆ.<br><br>ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 625 ವೆಚ್ಚ 5 2024, ದಿನಾಂಕ;06.06.2024ರ ಟಿಪ್ಪಣಿಯಲ್ಲಿ ಇಲಾಖೆಯಲ್ಲಿ ಮಂಜೂರಾಗಿ ಖಾಲಿ ಇರುವ 120 ತಜ್ಞ ವೈದ್ಯರು ಮತ್ತು 100 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಿಕೊಳ್ಳಲು ಆರ್ಥಿಕ ಇಲಾಖೆಯು ಸಹಮತಿಸಿದೆ. ಅದರಂತೆ ಟಿಪ್ಪಣಿಯಲ್ಲಿ ತಿಳಿಸಿರುವ ಷರತ್ತುಗಳಂತೆ ಭರ್ತಿ ಮಾಡಿಕೊಳ್ಳಲು ಕಡತವು ಚಾಲ್ತಿಯಲ್ಲಿರುತ್ತದೆ.<br><br>ಮುಂದುವರೆದು, ಕಲ್ಯಾಣ ಕರ್ನಾಟಕ ಭಾಗದಲ್ಲಿನ ಗ್ರೂಫ್-ಬಿ ಮತ್ತು ಸಿ ವೃಂದದ 877 ಅರೆ ವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ. |

ಸಂಖ್ಯೆ: ಆಕುಕ 13 ಹೆಚ್‌ಪಿಸಿ 2025

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು